ಮದ್ಯದಂಗಡಿಗಳ ಪರವಾನಿಗೆಯ ಬಗ್ಗೆ

1766 (2412) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):

ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮಂಡ್ಯ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳು ಹಾಗೂ ಬಾರ್‌ಗಳು ಎಷ್ಟು;

(ಆ) ಮದ್ಯದಂಗಡಿಗಳಿಗೆ ಹಾಗೂ ಬಾರ್‌ಗಳಿಗೆ ಪರವಾನಗಿ ನೀಡುವಾಗ ಅನುಸರಿಸುವ ವಿಧಿವಿಧಾನಗಳೇನು;

(ಇ) ಮದ್ಯದಂಗಡಿಗಳು ವ್ಯವಹಾರ ನಡೆಸಬೇಕಾದ ನಿಗದಿತ ವೇಳೆ ಏನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

(ಅ) ಸಿಎಲ್-2, ಮದ್ಯದಂಗಡಿಗಳು - 28

ಸಿಒಲ್-9, ಬಾರ್‌ಗಳು - 28

(ಆ) ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967 ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968 ---- ಪಾಲಿಸಲಾಗುತ್ತಿದೆ.

(ಇ) ಸಿಎಲ್-2 ಮದ್ಯದಂಗಡಿ - ಬೆಳಿಗ್ಗೆ 10.00 ರಿಂದ
ರಾತ್ರಿ 10.30
ಸಿಎಲ್-9 ಬಾರ್‌ಗಳು - ಬೆಳಿಗ್ಗೆ 10.00 ರಿಂದ
ಮಧ್ಯಾಹ್ನ 3.00
ಸಂಜೆ 5.30 ರಿಂದ
ರಾತ್ರಿ 11.00 ಗಂಟೆ

ರಾಜ್ಯದಲ್ಲಿ ಪೆಟ್ರೋಲ್ ಕಲಬೆರಕೆ

1768 (2414) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಪೆಟ್ರೋಲ್ ಕಲಬೆರಕೆ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಹಾಗಿದ್ದಲ್ಲಿ ಈ ಕಲಬೆರಕೆಯನ್ನು ತಡೆಯಲು ಸರ್ಕಾರವು ರೂಪಿಸಿರುವ ಕ್ರಮಗಳು ಯಾವುವು?